(ಇಂದು ದಿನಾಂಕಃ **10-09-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ವಾಯ್ ಎಂ ಜಿ ವಕೀಲರಿಂದಃ**

ನಾನು ದ್ವಿತೀಯ ಪಿ.ಯು.ಸಿ. ವ್ಯಾಸಾಂಗ ಮಾಡಿರುತ್ತೇನೆ. ನನಗೆ ಕನ್ನಡ ಹಾಗೂ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ನನ್ನ ದೂರಿನಲ್ಲಿ ಬರೆದಿರುವ ಅಂಶಗಳ ಬಗ್ಗೆ, ನಾನು ಕಳುಹಿಸಿದ ನೋಟಿಸು ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಎಲ್ಲಾ ದಾಖಲೆಗಳಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಒಕ್ಕಲುತನದ ಉದ್ಯೋಗ ಮಾಡುತ್ತೇನೆ. ನನಗೆ ಸಂಬಂಧಿಸಿ 40 ಎಕರೆ ಜಮೀನು ಇರುತ್ತದೆ. ಸದರಿ ಜಮೀನು ನೀರಾವರಿ ಜಮೀನು ಆಗಿದ್ದು, ಅದರಲ್ಲಿ ಈರುಳ್ಳಿ, ಗೋವಿನಜೋಳ, ಹೆಸರು ಹಾಗೂ ಕಡಲೆ ಬೆಳೆಗಳನ್ನು ಬೆಳೆಯಲಾಗಿರುತ್ತದೆ. ಸದರಿ ಜಮೀನು ನನ್ನ ಹಾಗೂ ನನ್ನ ತಂದೆಯ ಹೆಸರಿನಲ್ಲಿದ್ದು, ನನ್ನ ತಂದೆ ಈಗ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ ನಾನೊಬ್ಬನೇ ಗಂಡು ಮಗನಿದ್ದು, ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ. ಸದರಿ ಇಬ್ಬರು ಹೆಣ್ಣು ಮಕ್ಕಳ ವಿವಾಹವಾಗಿರುತ್ತದೆ. ನಾನು ಒಕ್ಕಲುತನವನ್ನು ಹೊರತು ಪಡಿಸಿ ಬೇರೆ ಉದ್ಯೋಗ ಮಾಡುವುದಿಲ್ಲ. ಸದರಿ ಜಮೀನಿನಿಂದ ವಾರ್ಷಿಕವಾಗಿ ನನಗೆ ರೂ. 20,00,000/- ಆದಾಯವಿರುತ್ತದೆ. ಸದರಿ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಹಂತ ಹಂತವಾಗಿ ಮಾರುಕಟ್ಟೆಗೆ ಕಳುಹಿಸುತ್ತೇನೆ. ಸದರಿ ಬೆಳೆಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದಾಗ ಅದಕ್ಕೆ ಸಂಬಂಧಿಸಿ ರಶೀದಿ ನೀಡುತ್ತಾರೆ ಎಂದರೆ ಸರಿ.

2. 2018 ರಲ್ಲಿ ನನಗೆ ರೂ. 20,00,000/- ಕೃಷಿ ಆದಾಯ ಬಂದಿರುತ್ತದೆ. ಆದರೆ ಯಾವ ಬೆಳೆಯಿಂದ ಎಷ್ಟು ಬಂದಿರುತ್ತದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಸದರಿ ವರ್ಷದಲ್ಲಿ ಬೆಳೆ ಮಾರಾಟ ಮಾಡಿದ್ದರ ಬಗ್ಗೆ ನನ್ನ ಬಳಿ ಬಿಲ್ಲುಗಳು ಇರುತ್ತವೆ. ಸದರಿ ಬಿಲ್ಲುಗಳನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಮನೆಯಲ್ಲಿ ಹುಡುಕಿ ಹಾಜರು ಪಡಿಸುತ್ತೇನೆ ಎಂದು ನುಡಿದಿರುತ್ತಾರೆ. ನನಗೆ 40 ಎಕರೆ ಜಮೀನು ಇರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸುತ್ತೇನೆ. 2018 ರಲ್ಲಿ ನನಗೆ ರೂ. 20,00,000/- ಕೃಷಿ ಆದಾಯ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಆರೋಪಿ ನನ್ನ ತಂದೆಯ ಸ್ನೇಹಿತರಾಗಿದ್ದು, ಆಗಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ಸದರಿಯವರು ಕಳೆದ 6-7 ವರ್ಷಗಳಿಂದ ನಮ್ಮ ಮನೆಗೆ ಬರುತ್ತಿದ್ದರು. ನನ್ನ ತಂದೆ 2021 ರಲ್ಲಿ ಮೃತಪಟ್ಟಿರುತ್ತಾರೆ. ಆರೋಪಿ ನನ್ನ ತಂದೆಗೆ 6-7 ವರ್ಷಗಳಿಂದ

ಪರಿಚಯವಿದ್ದಾರೆ ಎಂದು ನನ್ನ ದೂರಿನಲ್ಲಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಅಥಣಿ ತಾಲ್ಲೂಕಿನ ಮೋಳೆ ಗ್ರಾಮದಲ್ಲಿ ವಾಸವಿದ್ದಾರೆ. ನವಲಗುಂದದಿಂದ ಸದರಿ ಗ್ರಾಮ ಅಂದಾಜು 200 ಕಿ. ಮೀ. ಅಂತರದಲ್ಲಿದೆ ಎಂದರೆ ಸರಿ. ಆರೋಪಿ ಶೇ.75 ರಷ್ಟು ಅಂಗವಿಕಲ ಹೊಂದಿದ್ದಾರೆ ಎಂದರೆ ಸರಿ. ಸದರಿಯವರಿಗೆ ಪ್ರಯಾಣ ಮಾಡಲು ತೊಂದರೆಯಾಗುತ್ತದೆ ಎಂದರೆ ಸಾಕ್ಷಿಯು ಅವರು ಕಾರಿನಲ್ಲಿ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿ ಒಕ್ಕಲುತನದ ಕೆಲಸ ಮಾಡುತ್ತಾರೆ. ಸದರಿ ಹಣಕಾಸಿನ ವ್ಯವಹಾರ ನಾನು ಹಾಗೂ ನನ್ನ ತಂದೆ ಇದ್ದಾಗ ಆರೋಪಿಯೊಂದಿಗೆ ಆಗಿರುತ್ತದೆ. ಆರೋಪಿಗೆ ಎಷ್ಟು ಜಮೀನು ಇರುತ್ತದೆ ಎಂದು ಹೇಳಲಾಗುವುದಿಲ್ಲ. ಆರೋಪಿ ಒಕ್ಕಲುತನ ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ದೂರಿನ 2 ನೇ ಖಂಡಿಕೆಯಲ್ಲಿ ತಿಳಿಸಿದಂತೆ ಆರೋಪಿ ನನಗೆ ಯಾವುದೇ ರೀತಿ ಸಹಾಯ ಮಾಡಿರುವುದಿಲ್ಲ.

4. ನಾನು ಕೆ.ವಿ.ಜಿ. ಬ್ಯಾಂಕ್ ಮೊರಬ, ಎಸ್ ಬಿ ಐ ಹಾಗೂ ಬರೋಡಾ ಬ್ಯಾಂಕ್ ಖಾತೆಗಳನ್ನು ಹೊಂದಿರುತ್ತೇನೆ. ಆರೋಪಿ ಮನೆತನದ ಅಡಚಣೆಗಾಗಿ ರೂ. 15,00,000/- ಗಳನ್ನು ನನ್ನಿಂದ ಪಡೆದುಕೊಂಡಿರುತ್ತಾನೆ. ಸದರಿ ಹಣವನ್ನು ನಾನು ಹಾಗೂ ನನ್ನ ತಂದೆ ಸೇರಿ ನೀಡಿರುತ್ತೇವೆ. ಸದರಿ ಹಣ ನಮ್ಮ ಮನೆಯಲ್ಲಿತ್ತು. ಸದರಿ ಹಣ ಬೆಳೆ ಮಾರಾಟ ಮಾಡಿ ಬಂದ ಹಣವಾಗಿತ್ತು. ಸದರಿ ಹಣ ಪಾವತಿ ಮಾಡುವ ವೇಳೆ ನಾನು, ನನ್ನ ತಂದೆ ಹಾಗೂ ತಾಯಿ ಹಾಜರಿದ್ದೇವು. ಆರೋಪಿ ತಾವು ಒಬ್ಬರೇ ಕಾರ ಚಾಲಕನೊಂದಿಗೆ ಬಂದಿದ್ದರು. ಸದರಿ ಹಣ ರೂ.500 ಮುಖಬೆಲೆಯ ನೋಟುಗಳಿದ್ದವು. ನನ್ನ ತಾಯಿಯ ಸಾಕ್ಷಿಯನ್ನು ಮಾಡಿಸುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd**/-

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**